ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿಂದಗಿ

ಸಿ.ಸಿ.ನಂ.**3265/2024**

ಫಿರ್ಯಾದಿಃ ಕರ್ನಾಟಕ ರಾಜ್ಯ (ದೇವರ ಹಿಪ್ಪರಗಿ ಪೊಲೀಸ್ ಠಾಣೆ)

**ವಿರುದ್ಧ**

ಆರೋಪಿಃ

ಬಾದಶಾ @ ಬಾಶ್ಯಾ ತಂ. ಅಬ್ದುಲಖಾದ್ರಿಸಾಬ ತಿಕೋಟಿ,
ವಯಸ್ಸುಃ 40 ವರ್ಷ, ಉದ್ಯೋಗಃ ಡ್ರೈವರ,
ಸಾಃ ದೇವರ ಹಿಪ್ಪರಗಿ.

ಆರೋಪಣೆ

ದಿನಾಂಕ 08.05.2024 ರಂದು ರಾತ್ರಿ 8-00 ಗಂಟೆ ಸುಮಾರಿಗೆ ದೇವರಹಿಪ್ಪರಗಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ದೇವರ ಹಿಪ್ಪರಗಿ - ಇಂಡಿ ಸಾರ್ವಜನಿಕ ರಸ್ತೆಯ ಮೇಲೆ ಅಬ್ಬಾಸಲಿ ಮುಲ್ಲಾ ಇವರ ಇಟ್ಟಂಗಿ ಭಟ್ಟ ಹತ್ತಿರಿ ನೀವು ಆರೋಪಿತನು ನಡೆಸುತ್ತಿದ್ದ ಗೂಡ್ಸ್ ಟಂಟಂ ವಾಹನ ನಂ:ಕೆಎ:28/ಎಎ-1451 ನೇದ್ದಕ್ಕೆ ಇನ್ಸೂರೇನ್ಸ್ ಮಾಡಿಸದೆ, ಸದರ ವಾಹನವನ್ನು ದೇವರ ಹಿಪ್ಪರಗಿ-ಇಂಡಿ ಸಾರ್ವಜನಿಕ ರಸ್ತೆಯ ಮೇಲೆ ಇಂಡಿ ಕಡೆಯಿಂದ ದೇವರ ಹಿಪ್ಪರಗಿ ಕಡೆಗೆ ಹೋಗಲು ಅತೀ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವಂತೆ ನಡೆಯಿಸಿಕೊಂಡು ಬಂದು, ದೇವರ ಹಿಪ್ಪರಗಿ ಕಡೆಯಿಂದ ಇಂಡಿ ಕಡೆಗೆ ಅಂದರೆ ಇಟ್ಟಂಗಿ ಭಟ್ಟಿ ಕಡೆಗೆ ಸುಪರ್ ಎಕ್ಸ್ಎಲ್ ಮೋಟರ್ ಸೈಕಲ್ ನಂ:ಕೆಎ:28/ಇಸಿ-9685 ನೇದ್ದರ ಹಿಂದಿನ ಸೀಟಿನಲ್ಲಿ ಸಾಕ್ಷಿ ನಂ: 06 ನೇದ್ದವನಿಗೆ ಕುಡ್ರಿಸಿಕೊಂಡು ಹೋಗುತ್ತಿದ್ದ ಫಿರ್ಯಾದಿಯ ಗಂಡನಾದ ಮೃತ ವೀರಣ್ಣ ತಂದೆ ಶಿವಪ್ಪ ಹುಲಸೂರ, ಇವರ ಮೋಟಾರ್ ಸೈಕಲ್‌ಕ್ಕೆ ನೀವು ಎದುರಿನಿಂದ ಹಾಯಿಸಿ ಅಪಘಾತಪಡಿಸಿದ್ದಿರಿ ಆ ಮೂಲಕ ಭಾ.ದಂ.ಸಂಹೀತೆ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ನಿಮ್ಮ ವಾಹನವನ್ನು ಅತೀ ಜೋರಾಗಿ ಮತ್ತು ನಿರ್ಲಕ್ಷ್ಯತನದಿಂದ ಅಡ್ಡಾದಿಡ್ಡಿಯಾಗಿ ನಡೆಸಿಕೊಂಡು ಬಂದು, ನಿಮ್ಮ ಸುಪರ್ ಎಕ್ಸ್‌ಎಲ್ ಮೋಟರ್ ಸೈಕಲ್ ನಂ:ಕೆಎ:28/ಇಸಿ-9685 ನೇದ್ದರ ಹಿಂದಿನ ಸೀಟಿನಲ್ಲಿ ಸಾಕ್ಷಿ ನಂ: 06 ನೇದ್ದವನಿಗೆ ಕುಡ್ರಿಸಿಕೊಂಡು ಹೋಗುತ್ತಿದ್ದ ಫಿರ್ಯಾದಿಯ ಗಂಡನಾದ ಮೃತ ವೀರಣ್ಣ ತಂದೆ ಶಿವಪ್ಪ ಹುಲಸೂರ, ಇವರ ಮೋಟಾರ್ ಸೈಕಲ್‌ಕ್ಕೆ ನೀವು ಎದುರಿನಿಂದ ಹಾಯಿಸಿ ಅಪಘಾತಪಡಿಸಿ ಮತ್ತು ಸಾಕ್ಷಿ ನಂ: 06 ನೇದ್ದವನಿಗೆ ಸಾದಾ ಸ್ವರೂಪದ ಗಾಯಪಡಿಸಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 337 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ನಿಮ್ಮ ಗೂಡ್ಸ್ ಟಂಟಂ ವಾಹನವನ್ನು ಅತೀ ವೇಗವಾಗಿ ಮತ್ತು ನಿರ್ಲಕ್ಷ್ಯತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವಂತೆ ನಡೆಯಿಸಿಕೊಂಡು ಬಂದು, ದೇವರ ಹಿಪ್ಪರಗಿ ಕಡೆಯಿಂದ ಇಂಡಿ ಕಡೆಗೆ ಅಂದರೆ ಇಟ್ಟಂಗಿ ಭಟ್ಟಿ ಕಡೆಗೆ ಸುಪರ್ ಎಕ್ಸ್‌ಎಲ್ ಮೋಟರ್ ಸೈಕಲ್ ನಂ:ಕೆಎ:28/ಇಸಿ-9685 ನೇದ್ದರ ಹಿಂದಿನ ಸೀಟಿನಲ್ಲಿ ಸಾಕ್ಷಿ ನಂ: 06 ನೇದ್ದವನಿಗೆ ಕುಡ್ರಿಸಿಕೊಂಡು ಹೋಗುತ್ತಿದ್ದ ಫಿರ್ಯಾದಿಯ ಗಂಡನಾದ ಮೃತ ವೀರಣ್ಣ ತಂದೆ ಶಿವಪ್ಪ ಹುಲಸೂರ, ಇವರ ಮೋಟಾರ್ ಸೈಕಲ್‌ಕ್ಕೆ ನೀವು ಎದುರಿನಿಂದ ಹಾಯಿಸಿ ಅಪಘಾತಪಡಿಸಿ ಫಿರ್ಯಾದಿಯ ಗಂಡ ವೀರಣ್ಣ ಇವರು ಮರಣ ಹೊಂದುವಂತೆ ಮಾಡಿದ್ದಿರಿ, ಆ ಮೂಲಕ ಭಾ.ದಂ.ಸಂಹೀತೆ ಕಲಂ 304 (ಎ) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ, ಆರೋಪಿಯಾದ ನೀವು ನಿಮ್ಮ ಗೂಡ್ಸ್ ಟಂಟಂ ವಾಹನ ನಂ:ಕೆಎ:28/ಎಎ-1451 ನೇದ್ದಕ್ಕೆ ಇನ್ಸೂರೇನ್ಸ್ ಮಾಡಿಸದೆ, ಸದರ ವಾಹನವನ್ನು ದೇವರ ಹಿಪ್ಪರಗಿ-ಇಂಡಿ ಸಾರ್ವಜನಿಕ ರಸ್ತೆಯ ಮೇಲೆ ಇಂಡಿ ಕಡೆಯಿಂದ ದೇವರ ಹಿಪ್ಪರಗಿ ಕಡೆಗೆ ಹೋಗಲು ಅತೀ ವೇಗವಾಗಿ ಮತ್ತು

ನಿರ್ಲಕ್ಷ್ಯತನದಿಂದ ಮಾನವೀಯ ಜೀವಕ್ಕೆ ಅಪಾಯವಾಗುವಂತೆ ನಡೆಯಿಸಿಕೊಂಡು ಬಂದು, ಸುಪರ್ ಎಕ್ಸ್‌ಎಲ್ ಮೋಟರ್ ಸೈಕಲ್ ನಂ:ಕೆಎ:28/ಇಸಿ-9685 ನೇದ್ದರ ಹಿಂದಿನ ಸೀಟಿನಲ್ಲಿ ಸಾಕ್ಷಿ ನಂ: 06 ನೇದ್ದವನಿಗೆ ಕುಡ್ರಿಸಿಕೊಂಡು ಹೋಗುತ್ತಿದ್ದ ಫಿರ್ಯಾದಿಯ ಗಂಡನಾದ ಮೃತ ವೀರಣ್ಣ ಇವರ ಮೋಟಾರ್ ಸೈಕಲ್‌ಕ್ಕೆ ನೀವು ಎದುರಿನಿಂದ ಹಾಯಿಸಿ ಅಪಘಾತಪಡಿಸಿ, ಅಲ್ಲದೆ ನೀವು ನಿಮ್ಮ ವಾಹನವನ್ನು ಘಟನಾ ಸ್ಥಳದಲ್ಲಿ ಬಿಟ್ಟು ಓಡಿ ಹೋಗಿರುತ್ತೀರಿ ಆ ಮೂಲಕ ಆರೋಪಿಯಾದ ನೀವು ಮೋಟಾರು ವಾಹನ ಕಾಯ್ದೆ ಕಲಂ.187 ಮತ್ತು 146 ಸಹಕಲಂ 196 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಸದರಿ ಆರೋಪವು ನ್ಯಾಯಾಲಯದ ವ್ಯಾಪ್ತಿಯಲ್ಲಿದ್ದು, ಈ ನ್ಯಾಯಾಲಯದಿಂದ ಸದರಿ ಆರೋಪಕ್ಕೆ ನಿಮ್ಮನ್ನು ವಿಚಾರಣೆಗೆ ಒಳಪಡಿಸಲಾಗುವುದು.

ದಿನಾಂಕಃ ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಸಿಂದಗಿ</u>

<u>ಸಿ.ಸಿ.ನಂ.**3265/2024**</u>

<u>ಫಿರ್ಯಾದಿಃ</u> ಕರ್ನಾಟಕ ರಾಜ್ಯ (ದೇವರ ಹಿಪ್ಪರಗಿ ಪೊಲೀಸ್ ಠಾಣೆ)

**ವಿರುದ್ಧ**

<u>ಆರೋಪಿಃ</u>

ಬಾದಶಾ @ ಬಾಶ್ಯಾ ತಂ. ಅಬ್ದುಲಖಾದ್ರಿಸಾಬ ತಿಕೋಟಿ,
ವಯಸ್ಸುಃ 40 ವರ್ಷ, ಉದ್ಯೋಗಃ ಡ್ರೈವರ,
ಸಾಃ ದೇವರ ಹಿಪ್ಪರಗಿ.

1. ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?

ಉಃ

2. ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆಯಾಗಬೇಕೇ?

ಉಃ

ದಿನಾಂಕಃ ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಆರೋಪವನ್ನು ಓದಿ, ತಿಳಿಸಿ ಹೇಳಿ, ಕೇಳಿ ಉತ್ತರವನ್ನು ಪಡೆಯಲಾಗಿದೆ ಎಂದು ಈ ಮೂಲಕ ದೃಡೀಕರಿಸಿದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.